

# ಚಿರತೆಯನ್ನು ಕೊಂದ ಮುಳ್ಳು ಹಂದಿ

ಒಂದು ದಟ್ಟವಾದ ಅರಣ್ಯ. ಆ ಅರಣ್ಯದಲ್ಲಿ ನಾನಾ ಜಾತಿಯ ಕಾಡುಪ್ರಾಣಿಗಳು ನಿರ್ಭಯದಿಂದ ಬದುಕುತ್ತಿದ್ದವು.

ಯಾವುದೇ ಬೇಟೆಗಾರರ ಕಾಟವು ಈ ಅರಣ್ಯದಲ್ಲಿರಲಿಲ್ಲ. ಎಲ್ಲ ಕಾಡುಪ್ರಾಣಿಗಳು ಅನ್ಯೋನ್ಯತೆಯಿಂದ ಸುಖದಿಂದಲೇ ಇದ್ದವು.

ಕಾಡಿನ ರಾಜ ಸಿಂಹನು ಬಹಳ ಸಂತೋಷದಿಂದ ‘ಗೆಳೆಯರೇ ನಮ್ಮ ಈ ದಟ್ಟವಾದ ಅರಣ್ಯಕ್ಕೆ ಈವರೆವಿಗೂ ಯಾವುದೇ ಒಬ್ಬ ಬೇಟೆಗಾರನಾಗಲೀ, ಕಾಡುಗಳ್ಳರಾಗಲಿ ಬಂದಿರುವುದಿಲ್ಲ. ನಾವು ಈ ಅರಣ್ಯದಿಂದ ಹೊರಹೋಗಿ ನಾಡಿನ ಜನರಿಗೆ ತೊಂದರೆಕೊಟ್ಟಿಲ್ಲ. ಇದುವೇ ಉತ್ತಮವಾದ ಬೆಳವಣಿಗೆ’ ಎಂದಿತು.

ಆನೆ ‘ನಿಜ ಸಿಂಹರಾಜ, ನಾನು ಸಹ ಅನೇಕಾನೇಕ ಕಥೆಗಳನ್ನು ನನ್ನ ತಾಯಿಯಿಂದ ಕೇಳಿ ತಿಳಿದುಕೊಂಡಿದ್ದೇನೆ. ಯಾವುದೋ ಅರಣ್ಯ ಪ್ರದೇಶದಲ್ಲಿ ವೀರಪ್ಪನ್ ಎಂಬುವನು ನಮ್ಮ ಬಳಗದ ದಂತಗಳಿಗಾಗಿ, ಆನೆಗಳ ಮಾರಣಹೋಮ ಮಾಡುತ್ತಿದ್ದನೆಂದು, ಅವನನ್ನು ಹಿಡಿಯಲು ಸರ್ಕಾರ ಅನೇಕ ಪ್ರಯತ್ನ ನಡೆಸಿ, ಕೊನೆಗೆ ಅವನನ್ನು ಕೊಂದರೆಂದು ಕೇಳಿದ್ದೇನೆ. ಅದೃಷ್ಟವಶಾತ್ ನಿನ್ನ ಆಡಳಿತದಲ್ಲಿ ಯಾವ ದಂತಚೋರರ ಕಾಟವು ಇಲ್ಲಿ ಅರಣ್ಯದಲ್ಲಿ ನಡೆದಿಲ್ಲ’ ಎಂದು ಸಂತಸ ವ್ಯಕ್ತಪಡಿಸಿತು.

ಅಲ್ಲಿದ್ದ ಎಲ್ಲ ಕಾಡು ಪ್ರಾಣಿಗಳು ಇಲ್ಲಿನ ಅರಣ್ಯವು ತಮಗೆ ಸುರಕ್ಷತೆ, ಶಾಂತಿ ನೆಮ್ಮದಿಯನ್ನು ನೀಡಿದೆ ಎಂದು ಕೊಂಡಾಡಿದವು.

ಆ ಸಭೆಯಲ್ಲಿ ಚಿರತೆ ಮತ್ತು ಅದರ ಗೆಳೆಯ ಮುಳ್ಳುಹಂದಿ ಕೂಡ ಭಾಗವಹಿಸಿದ್ದವು.

ಚಿರತೆ ಪಕ್ಕದಲ್ಲಿದ್ದ ಮುಳ್ಳುಹಂದಿಗೆ ಹೇಳಿತು ‘ಗೆಳೆಯ, ನಮ್ಮ ಅರಣ್ಯ ದಟ್ಟವಾಗಿರುವುದರಿಂದ ಇಲ್ಲಿಗೆ ಯಾರೂ ಬಂದಿಲ್ಲದಿರಬಹುದು ಮತ್ತು ಈ ಮನುಷ್ಯರು ಹೆದರಿಕೊಂಡು ಕಾಡಿನೊಳಗೆ ಬರುವ ಸಾಹಸ ಮಾಡದೇ ಇರಬಹುದು.

ಮುಳ್ಳು ಹಂದಿಯು ‘ಎಲೈ ಚಿರತೆಯೇ ಅದ್ಯಾಕೆ ಬೇಕು ನಮಗೆ. ನಾವಂತು ಇಲ್ಲಿ ಸುಖವಾಗಿ ಬಾಳುತ್ತಿದ್ದೇವಲ್ಲ. ಸುಮ್ಮಿರು’ ಎಂದಿತು.

ಚಿರತೆ ಎಂದಿತು ‘ಹಾಗಲ್ಲ ಗೆಳೆಯ, ನಾವು ಒಂದೇ ಕಾಡಿನಲ್ಲಿದ್ದರೆ, ಬಾವಿಯಲ್ಲಿರುವ ಕಪ್ಪೆಯಂತೆ, ಇದೇ ಪ್ರಪಂಚವೆಂದು ತಿಳಿದುಕೊಂಡು ಬಿಡುತ್ತೇವೆ. ನಾವು ಈ ಅರಣ್ಯ ಬಿಟ್ಟು ಹೊರ ಜಗತ್ತು ಹೇಗಿದೆ ಎಂದು ನೋಡಿಕೊಂಡು ಬರೋಣಾ’ ಎಂದು ಮುಳ್ಳುಹಂದಿಯನ್ನು ಗೋಗರೆಯಿತು.

ಚಿರತೆಯ ಒತ್ತಾಯಕ್ಕೆ ಕಟ್ಟುಬಿದ್ದ ಮುಳ್ಳುಹಂದಿಯು ‘ಎಲೈ ಚಿರತೆಯೇ ನೀನು ನನಗೊಂದು ಮಾತು ಕೊಡಬೇಕು’. ಅಕಸ್ಮಾತ್ ಈ ಕಾಡು ದಾಟಿದ ಮೇಲೆ ಮನುಷ್ಯರು ವಾಸವಿರುವ ಯಾವುದಾದರೂ ಹಳ್ಳಿ– ನಗರ ಸಿಕ್ಕರೆ ನೀನು ಅಲ್ಲಿರುವವರಿಗೆ, ಪ್ರಾಣಿಗಳಿಗೆ ಏನು ತೊಂದರೆ ಕೊಡಬಾರದು. ಕೇವಲ ನಾವು ಹೋಗಿ ಬರುತ್ತಿರುವುದು ಹೊರ ಪ್ರಪಂಚ ಹೇಗಿದೆ ಎಂದು ನೋಡುವುದಕ್ಕೆ ಮಾತ್ರ’ ಎಂದಿತು.

ಚಿರತೆಯು ‘ಅಯ್ಯು ಅಣ್ಣ, ನಿನ್ನ ಮಾತಿಗೆ ನಾನು ಎದುರುತ್ತರ ಕೊಡುತ್ತೇನೆಯೇ? ಎಂದಿತು. ಚಿರತೆ ಮತ್ತು ಮುಳ್ಳುಹಂದಿಯು ಅಂದೇ ಕಾಡು ಬಿಟ್ಟು ಹೊರ ಹೊರಟವು.

ಬಹಳ ದೂರ ಅವೆರಡು ಪ್ರಯಾಣಿಸಿದ ನಂತರ, ಒಂದು ಹಳ್ಳಿ ಸಿಕ್ಕಿತು. ರಾತ್ರಿ ಮುಳ್ಳುಹಂದಿ ಮತ್ತು ಚಿರತೆಗಳೆರಡು ಒಂದು ಕಲ್ಲು ಬಂಡೆಯ ಪೊಟರೆಯೊಳಗೆ ಮಲಗಿದವು.

ಮುಳ್ಳುಹಂದಿ ಮಲಗಿದ ಕೂಡಲೇ ಚಿರತೆಯ ಮೂಗಿಗೆ ಹಳ್ಳಿಯಲ್ಲಿನ ಜನರ, ಪ್ರಾಣಿಗಳ ವಾಸನೆ ಬಡಿಯಿತು. ‘ಈ ಮುಳ್ಳುಹಂದಿ ಮಲಗಿರಲಿ, ನಾನು ಹಳ್ಳಿಯಲ್ಲಿ ಯಾವುದಾದರೂ ದನ, ಆಡು, ಮೇಕೆಯನ್ನು ತಿಂದುಕೊಂಡು ಬರುತ್ತೇನೆ. ಇಂತಹ ಬೇಟೆ ತಿನ್ನಲು ಸಿಗದೆ ಬಹಳ ದಿನವಾಗಿದೆ’ ಎಂದುಕೊಂಡು ಹಳ್ಳಿಯ ಕಡೆಗೆ ಜಿಗಿಯುತ್ತ ಓಡಿತು.

ಹಳ್ಳಿಯ ಕೊಟ್ಟಿಗೆಯಲ್ಲಿ ದನ–ಕರುಗಳು ನಿಶ್ಚಿಂತೆಯಿಂದ ಮಲಗಿದ್ದವು. ಚಿರತೆಯು ಅಲ್ಲಿದ್ದ ದನದ ಕರುವಿನ ಕುತ್ತಿಗೆಗೆ ಬಾಯಿ ಹಾಕಿ ಅದರ ರಕ್ತ ಕುಡಿಯ ತೊಡಗಿತು. ಪಕ್ಕದಲ್ಲಿದ್ದ ಅದರ ತಾಯಿ ಮತ್ತು ಬಂಧುಗಳು ಚಿರತೆಯ ದಿಢೀರ್ ಆಕ್ರಮಣಕ್ಕೆ ಹೆದರಿ ‘ಅಂಬಾ’ ಎಂದು ಕೂಗತೊಡಗಿದವು.